# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್‌–119 ಧರ್ಮರಾಯಸ್ವಾಮಿ ದೇವಸ್ಥಾನ, ದಾಸಪ್ಪ ಆಸ್ಪತ್ರೆ ಆವರಣ, ಟೌನ್‌ಹಾಲ್ ಹತ್ತಿರ, ಬೆಂಗಳೂರು**


ಸಂಖ್ಯೆ:ಸ.ಇಂ/ವಾ–119/ವಾರ್ಡ್ ಸಭೆ/2020–21 ದಿನಾಂಕ:06/02/2021

## ವಾರ್ಡ್ –119ರ ವಾರ್ಡ್ ಸಭೆಯ ನಡವಳಿ

ದಿನಾಂಕ:06/02/2021 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್–119ರ ವಾರ್ಡ್ ಕಛೇರಿಯಲ್ಲಿ ಶ್ರೀ. ಡಿ.ಕೆ. ಮಧುಸೂದನ್, ಸ.ಕಾ.ನಿ.ಅ (ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ ರವರ ಕಛೇರಿ) ವಾರ್ಡ್119ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು :–**

1. ಶ್ರೀ. ಡಿ.ಕೆ. ಮಧುಸೂದನ್. ನೋಡಲ್ ಅಧಿಕಾರಿ ವಾರ್ಡ್–119
2. ಶ್ರೀ. ಎನ್. ಪ್ರದೀಪ್ ಕುಮಾರ್, ಸಂಚಾಲಕರು ಮತ್ತು ಕಾರ್ಯದರ್ಶಿ ವಾರ್ಡ್–119.
3. ಶ್ರೀ. ಸೀತಾರಾಮಯ್ಯ, ಹಿ.ಆ.ಪ ವಾರ್ಡ್–119.
4. ಶ್ರೀ. ಬಾಬುಕುಮಾರ್, ಕೆಲಸ ಪರಿವೀಕ್ಷಕರು ವಾರ್ಡ್–119.
5. ಶ್ರೀ. ಸಂಪತ್, ಮೀಟರ್ ರೀಡರ್ BWSSB
6. ಶ್ರೀ. ಗಂಗಾ, ಪಿ.ಎಸ್.ಐ ಪೊಲೀಸ್ ಇಲಾಖೆ,
7. ಶ್ರೀ. ರಾಜೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ.
8. ಶ್ರೀ. ಸಂಪತ್, ವಾಟರ್ ಮ್ಯಾನ್

**ಹಾಜರಿದ್ದ ಸ್ಥಳೀಯರು :–**

1. ಶ್ರೀ. ಗೋಪಿ.
2. ಶ್ರೀ. ಸತೀಶ್
3. ಶ್ರೀ. ವಿಜಯಕುಮಾರ್
4. ಶ್ರೀ. ಪ್ರದೀಪ್‌ಕುಮಾರ್

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಸಭೆಗೆ ಎಲ್ಲರನ್ನು ಸ್ವಾಗತದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು. ಈ ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳನ್ನು ಅವಲೋಕಿಸುತ್ತಾ ಸದರಿ ವಿಷಯಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ವಿಚಾರಿಸಲಾಗಿ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ತಿಳಿಸಲಾಯಿತು.

ಮು.ತಿ.ನೋ..

**ಚರ್ಚಿಸಲಾದ ವಿಷಯಗಳು:-**

1. **ವಿದ್ಯುತ್ ವಿಭಾಗ:-**

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಗೋಪಿ, ಸತೀಶ್, ವಿಜಯಕುಮಾರ್, ಪ್ರದೀಪ್‌ಕುಮಾರ್, ಷಣ್ಮುಗಂ ಹಾಗೂ ಸುಲೇಮಾನ್ ರವರುಗಳು ಮಾತನಾಡಿ ವಾರ್ಡ್ ವ್ಯಾಪ್ತಿಯ ಧರ್ಮರಾಯ ದೇವಸ್ಥಾನ ರಸ್ತೆ, ಕೋಟೆ ಸ್ಟ್ರೀಟ್, ಪಿ.ಎಂ. ಲೇನ್, ಇನ್ನೂ ಹಲವು ರಸ್ತೆಗಳಲ್ಲಿ ರಸ್ತೆ ದೀಪ ಹಾಳಾಗಿದ್ದು, ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿರುವುದಾಗಿ ತಿಳಿಸಿದರು. ವಿದ್ಯುತ್ ವಿಭಾಗಕ್ಕೆ ಸಂಬಂಧಪಟ್ಟಂತೆ ಅಧ್ಯಕ್ಷರು ಮಾತನಾಡಿ, ವಿದ್ಯುತ್ ವಿಭಾಗಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರುಹಾಜರಾದ ಹಿನ್ನೆಲೆಯಲ್ಲಿ ಮುಂದಿನ ಸಭೆಗೆ ಹಾಜರಾಗುವಂತೆ ಎಚ್ಚರಿಸಿ ತಪ್ಪಿದಲ್ಲಿ ಅವರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ಸಭೆಗೆ ತಿಳಿಸಿದರು.

2. **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ:-**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗಕ್ಕೆ ಸಂಬಂಧಪಟ್ಟಂತೆ ಅಧ್ಯಕ್ಷರು ಮಾತನಾಡಿ, ಕಳೆದ ಸಭೆಗಳಲ್ಲಿ ಬಂದಿದ್ದಂತಹ ದೂರುಗಳನ್ನು ನಿವಾರಿಸಿರುವ ಬಗ್ಗೆ ವಿಚಾರಿಸಿದರು. ಹೊಸದಾಗಿ ಆಗಬೇಕಿದ್ದ ಕೆಲಸ ಕಾರ್ಯಗಳ ಬಗ್ಗೆ ಹಾಜರಿದ್ದ ಸಾರ್ವಜನಿಕರು :ಘಖಖ: ಅಧಿಕಾರಿಗಳಾದ ಶ್ರೀ. ಚೆನ್ನಾಪ್ಪಾಜಿ ರವರಿಗೆ ತಿಳಿಸಿದರು.

- ಮ್ಯಾನ್‌ಹೋಲ್‌ಗಳಿಂದ ತೆಗೆದ ಹೂಳನ್ನು ರಸ್ತೆಯ ಮೇಲಿಂದ ತೆಗೆಯಲು ಕೋರಿರುತ್ತಾರೆ.
- ಎಸ್.ಜೆ.ಪಿ ರಸ್ತೆ 4ನೇ ಅಡ್ಡರಸ್ತೆಯಲ್ಲಿ ನೀರು ಸೋರಿಕೆಯಾಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ.

ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ.ಚೆನ್ನಾಪ್ಪಾಜಿ ರವರಿಗೆ ಮುಂದಿನ ಸಭೆಗೆ ಹಾಜರಾಗುವ ಮುನ್ನು ಮೇಲಿನ ದೂರುಗಳನ್ನು ನಿವಾರಿಸಲು ಸೂಚಿಸಿರುತ್ತಾರೆ.

3. **ಸಂಚಾರಿ ಪೊಲೀಸ್ ಇಲಾಖೆ:-**

ಸಂಚಾರಿ ಪೊಲೀಸ್ ಇಲಾಖೆಗೆ ಸಂಬಂಧಪಟ್ಟಂತೆ

ಜಾಮಿಯಾ ಮಸೀದಿ ರಸ್ತೆಯಲ್ಲಿ ಬೀದಿ ಬದಿ ವ್ಯಾಪಾರಿಗಳು ಹೆಚ್ಚಾಗಿದ್ದು, ನಿಯಂತ್ರಿಸುವಂತೆ ಕೋರಿರುತ್ತಾರೆ.

ಫೋರ್ಟ್ "ಬಿ" ಮತ್ತು "ಸಿ" ಸ್ಟ್ರೀಟ್ ರಸ್ತೆಗಳಲ್ಲಿ ರುಕ್ಕಮ್ಮ ಟ್ರಾನ್ಸ್‌ಪೋರ್ಟ್‌ಗೆ ಸಂಬಂಧಪಟ್ಟ ಬಸ್ಸುಗಳನ್ನು ನಿಲ್ಲಿಸಿದ್ದು, ತೆರವುಗೊಳಿಸಲು ಕೋರಿರುತ್ತಾರೆ.

ಮಾರುಕಟ್ಟೆ ಮೇಲು ಸೇತುವೆಯಿಂದ ಟೌನ್‌ಹಾಲ್ ಕಡೆಗೆ ಬರುವ ದಾರಿಯಲ್ಲಿ ಎಡ ತಿರುವು ಇಲ್ಲದಿದ್ದರೂ ವಾಹನ ಸವಾರರು ಎಡ ತಿರುವು ಮಾಡುತ್ತಿರುತ್ತಾರೆ. ಹಾಗೂ ಸುಮಾರು ಅಪಘಾತಗಳು ಆಗಿರುತ್ತದೆ. ಈ ಬಗ್ಗೆ ಸಂಚಾರ ಪೊಲೀಸ್ ಇಲಾಖೆಯವರು ಗಮನ ಹರಿಸುವಂತೆ ತಿಳಿಸಿರುತ್ತಾರೆ.

ಮು.ತಿ.ನೋ..

## 4. ಕಂದಾಯ ವಿಭಾಗ:-

ಕಂದಾಯ ವಿಭಾಗವನ್ನು ಉದ್ದೇಶಿಸಿ ಅಧ್ಯಕ್ಷರು ಮಾತನಾಡಿ ಪ್ರತಿ ವಾರದ ಕಂದಾಯ ವಸೂಲಾತಿ ಬಗ್ಗೆ ವಿವರಗಳನ್ನು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ಹಾಜರುಪಡಿಸುವಂತೆ ಸೂಚಿಸಿದರು. ಹಾಗೂ ಕಳೆದ ವಾರದ ಕಂದಾಯ ವಸೂಲಾತಿ ಬಗ್ಗೆ ವಿಚಾರಿಸಲಾಗಿ ಶ್ರೀ. ಶಂಕರ್ ಕಂದಾಯ ಪರಿವೀಕ್ಷಕರು ಉತ್ತರಿಸಿ ಕಳೆದ ವಾರದಲ್ಲಿ ರೂ. 16,56,473/- ಗಳಷ್ಟು ಹಾಗೂ ಈ ವಾರದಲ್ಲಿ ರೂ. 16,81,574/- ಗಳಷ್ಟು ಕಂದಾಯ ವಸೂಲಾತಿಯಾಗಿರುವುದಾಗಿ ತಿಳಿಸಿದರು.

ಸಾರ್ವಜನಿಕರಿಂದ ವಾರ್ಡಿಗೆ ಸಂಬಂಧಪಟ್ಟ ದೂರುಗಳನ್ನು ವಿಚಾರಿಸಲಾಗಿ ಈ ಕೆಳಕಂಡಂತೆ ದೂರುಗಳು ಬಂದಿರುತ್ತವೆ.

- ಕುಂಬಾರಪೇಟೆ ಮುಖ್ಯರಸ್ತೆಯನ್ನು ಸ್ವಚ್ಛಗೊಳಿಸುವಂತೆ ಕೋರಿರುತ್ತಾರೆ.
- 3, 4 & 5ನೇ ಅಡ್ಡರಸ್ತೆ ಹಾಗೂ ನರಸಿಂಹ ಜೋಯಿಸ್ ಲೇನ್ ನಲ್ಲಿ BWSSB ಇಲಾಖೆಯಿಂದ ಹೊಸದಾಗಿ ಒಳಚರಂಡಿ ಲೈನ್ ಅಳವಡಿಸಲು ಕೋರಿರುತ್ತಾರೆ.
- ವಾರ್ಡ್‌ನಲ್ಲಿ ನಡೆಯುತ್ತಿರುವ ಎಲ್ಲಾ ವಾಣಿಜ್ಯ ಚಟುವಟಿಕೆಗಳಿಗೆ ಟ್ರೇಡ್ ಲೈಸನ್ಸ್ ಪಡೆಯುವಂತೆ ಸೂಚಿಸಲು ಹಾಗೂ ಪಡೆಯದಿದ್ದಲ್ಲಿ ನೋಟಿಸ್ ಜಾರಿ ಮಾಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿರುತ್ತಾರೆ.
- ಶ್ರೀ. ಲಕ್ಷ್ಮೀನಾರಾಯಣ ರವರು ಮಾತನಾಡಿ ಕಬ್ಬನ್‌ಪೇಟೆ ಮಾರುಕಟ್ಟೆ ಅಭಿವೃದ್ಧಿ ಬಗ್ಗೆ ಗಮನ ಹರಿಸಲು ಕೋರಲಾಗಿ ಸದರಿ ವಿಚಾರವಾಗಿ ಸಹ ಕಂದಾಯ ಅಧಿಕಾರಿ ಮಾರುಕಟ್ಟೆ ರವರನ್ನು ಮುಂದಿನ ಸಭೆಗೆ ಹಾಜರಾಗುವಂತೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.
- ಮ್ಯಾನ್‌ಹೋಲ್ ಕಟ್ಟಡ ಕಾಮಗಾರಿ ಮುಗಿದ ನಂತರ ಅದರ ಸುತ್ತ ಯಾವುದೇ ಡೆಬ್ರಿಸ್ ಬಿಡದಂತೆ ಹಾಗೂ ಮ್ಯಾನ್‌ಹೋಲ್‌ನಿಂದ ತೆಗೆದ ಸಿಲ್ಟ್‌ನ್ನು ತೆರವುಗೊಳಿಸುವಂತೆ ಸೂಚಿಸಿದರು.
- ಶ್ರೀ. ಚೆನ್ನಪ್ಪಾಜಿ ರವರು ಮಾತನಾಡಿ ಉಸ್ಮಾನ್ ಖಾನ್ ಗಲ್ಲಿಯಲ್ಲಿ ಹೊಸದಾಗಿ ಒಳಚರಂಡಿ ಕೊಳವೆ ಅಳವಡಿಸಬೇಕಾಗಿದ್ದು, ಅನುದಾನ ನೀಡಲು ಕೋರಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಹಾಜರಿದ್ದ ಸ್ಥಳೀಯರಿಗೆ ನಮ್ಮ ಪಾಲಿಕೆ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಗೈರುಹಾಜರಾದ ಅಧಿಕಾರಿಗಳಿಗೆ ಎಚ್ಚರಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿ, ತಪ್ಪಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ಎಚ್ಚರಿಸಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸ್ಥಳೀಯರಿಗೆ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ಪ್ರದೀಪ್‌ಕುಮಾರ್ ಎನ್) | (ಡಿ.ಕೆ. ಮಧುಸೂದನ್) 6/2/21 |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ವಾರ್ಡ್-119 ಧರ್ಮರಾಯಸ್ವಾಮಿ ದೇವಸ್ಥಾನ | ವಾರ್ಡ್-119 ಧರ್ಮರಾಯಸ್ವಾಮಿ ದೇವಸ್ಥಾನ |